ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)

| | | | | |
|---|---|---|---|---|
| ಹೇಳಿಕೆ ಹಾಳೆ (ಆರ್.ಪಿ ಸಂಖ್ಯೆ57) ನಮೂನೆ ಸಂಖ್ಯೆ4 (ಸಿವಿಲ್) | 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ | | | |
| | ಸಿ.ಸಿ ಸಂಖ್ಯೆ 802/2015 | | | |
| | ಸಿಡಬ್ಲೂ | 1 | ಪಿಡಬ್ಲೂ | 5 |

| | |
|---|---|
| ಸಾಕ್ಷಿಯ ಹೆಸರು | ಅಂಕಿತ ಮನೋಹರ ಉಪಾಧ್ಯೆ |
| ತಂದೆಯ ಹೆಸರು | ಮನೋಹರ |
| ವಯಸ್ಸು | 24 ವರ್ಷ |
| ಉದ್ಯೋಗ | ಪೂಜಾರಿ |
| ವಾಸಸ್ಥಳ | ದತ್ತವಾಡ |

ದಿನಾಂಕ 20/04/2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಮಲ್ಲಿಕವಾಡದ ಜೈನ ಮಂದಿರದಲ್ಲಿ ನಾನು ಪೂಜಾರಿಕೆ ಕೆಲಸ ಮಾಡುತ್ತಿರುತ್ತೇನೆ. ಮುಂಜಾನೆ 6-00 ಗಂಟೆಗೆ ಜೈನ ಮಂದಿರಕ್ಕೆ ಹೋಗಿ ಪೂಜಾ ಅಭಿಷೇಕ ಮಾಡುತ್ತೇನೆ. ಸಾಯಂಕಾಲ 6-00 ಗಂಟೆಗೆ ಆರತಿ ಮಾಡುತ್ತಿದ್ದೆ. ಬಾಕಿ ಜೈನ ಮಂದಿರದ ಪೂಜಾ ಕೆಲಸವನ್ನು ಮಾಡುತ್ತಿರುತ್ತೇನೆ. ಈಗ 4 ವರ್ಷಗಳ ಹಿಂದೆ ಜೈನ ಮಂದಿರದಲ್ಲಿ ಕಳ್ಳತವಾಗಿರುತ್ತದೆ. ಮುಂಜಾನೆ ಪೂಜೆ ಮಾಡಲು ಜೈನ ಮಂದಿರಕ್ಕೆ ಹೋದಾಗ ಮಂದಿರದ ಕೀಲಿ ಒಡೆದು ತೆಗೆಯಲಾಗಿತ್ತು. ನಮ್ಮ ತಂದೆಯವರು ಜೈನ ಮಂದಿರದ ಚೆರಮನ್ ಹಾಗೂ ಅಧ್ಯಕ್ಷರಿಗೆ ತಿಳಿಸಿ ನಂತರ ಪೋಲೀಸರಿಗೆ ದೂರು ಕೊಟ್ಟಿರುತ್ತೇವೆ. ನಂತರ ಪೋಲೀಸರು ಬಂದು ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿ ಈಗ ದೂರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿಃ 3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 3 ಎ ಎಂದು ಗುರುತಿಸಲಾಯಿತು. ನಾನು ಪಂಚನಾಮೆಯಲ್ಲಿ ಹಾಜರಿದ್ದು ಸ್ಥಳ ತೋರಿಸಿ ಮಾಹಿತಿ ನೀಡಿರುತ್ತೇನೆ. ಈ ಹಿಂದೆ ನ್ಯಾಯಾಲಯದ ಮುಂದೆ ಇರುವ 1 ಮತ್ತು 3 ನೇ ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು).

ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಜೈನ ಮಂದಿರದಲ್ಲಿ ಎರಡು ಬದಿಯಲ್ಲಿ ಪಿಲ್ಲರ್ ಗಳ ಕೆಳಗೆ ದಾನ ಪೆಟ್ಟಿಗೆಯನ್ನು ಕೂಡಿಸಿರುತ್ತೇವೆಂದರೆ ಸರಿ. ಸದರಿ ದಾನ ಪೆಟ್ಟಿಗೆಗಳನ್ನು ಅಮವಾಸ್ಯೆಗೆ ಒಂದು ಬಾರಿ ತೆಗೆದು ರೊಕ್ಕ ಲೆಕ್ಕ ಹಾಕುತ್ತೇವೆಂದರೆ ಸರಿ. ದಿಃ 26-07-2014 ರಂದು ಸದರಿ ದಾನ ಪೆಟ್ಟಿಗೆಯನ್ನು ತೆಗೆದು ಹಣವನ್ನು ಲೆಕ್ಕ ಮಾಡಿರುತ್ತೇವೆ. ಆಗ ನಗದು ಹಣ 11,035/- ರೂಗಳು ಇದ್ದವು ಎಂದರೆ ಸರಿ. ನಾನು ದಿಃ 06-08-2014 ರಂದು ಸಂಜೆ ಪೂಜೆ ಮಾಡಿ ಹೋಗಿರುತ್ತೇನೆ. ಮರುದಿನ

ಬಂದು ನೋಡುವಾಗ ಮಂದಿರದ ಬಾಗಿಲುಗಳು ಮುರಿದಿದ್ದವು ಎಂದರೆ ಸರಿ. ನಂತರ ನಾನು ಈ ವಿಷಯವನ್ನು ಚಾಸಾಃ 8 ರಿಂದ 10 ಹಾಗೂ 13 ರವರಿಗೆ ಹೇಳಿರುತ್ತೇನೆಂದರೆ ಸರಿ. ನಂತರ ನಾವೆಲ್ಲರೂ ಸೇರಿ ಮಂದಿರದ ಒಳಗೆ ಹೋಗಿ ನೋಡಿದಾಗ ಅಲ್ಲಿ ದಾನ ಪೆಟ್ಟಿಗೆಗಳು ಇರಲಿಲ್ಲ. ನಂತರ ನಾವು ಹುಡುಕುತ್ತಾ ಇದ್ದಾಗ ನಮ್ಮ ಮಂದಿರದ 500 ಪುಟ ಅಂತರದಲ್ಲಿ ಚಾಸಾಃ 14 ರವರ ಕಬ್ಬು ಹೊಲದಲ್ಲಿ ಒಂದು ದಾನ ಪೆಟ್ಟಿಗೆ ಸಿಕ್ಕಿರುತ್ತದೆ. ಅಲ್ಲಿಂದ 400 ಪುಟ ಅಂತರದಲ್ಲಿ ಚಾಸಾಃ 16 ರವರ ಹೊಲದಲ್ಲಿ ಮತ್ತೊಂದು ದಾನ ಪೆಟ್ಟಿಗೆ ಸಿಕ್ಕಿರುತ್ತದೆ. ಅದನ್ನು ಒಡೆದು ತೆಗೆದು ಅದರಲ್ಲಿ ಯಾವುದೇ ಹಣ ಇರಲಿಲ್ಲ. ಸುಮಾರು 5000/- ರೂಗಳು ಇರಬಹುದು ಅಂತಾ ಅಂದಾಜು ಮಾಡಿರುತ್ತೇವೆ. ನಮ್ಮ ಎರಡು ದಾನ ಪೆಟ್ಟಿಗೆಗಳನ್ನು ಪೋಲೀಸರು ನಮಗೆ ಕೊಟ್ಟಿರುತ್ತಾರೆ. ಪೋಲೀಸರು ಪಂಚನಾಮೆಗೆ ಬಂದಾಗ ಮುರಿದ ಒಂದು ಚೀಲಕದ ಕೊಂಡಿಯನ್ನು ಜಪ್ತು ಮಾಡಿಕೊಂಡು ಹೋಗಿರುತ್ತಾರೆಂದರೆ ಸರಿ.

ನಂತರ ಪೋಲೀಸರು ನನ್ನನ್ನು ಸದಲಗಾ ಪೋಲೀಸ್ ಠಾಣೆಗೆ ಕರೆಯಿಸಿ ಈ ಪ್ರಕರಣದ 3 ಜನ ಆರೋಪಿತರನ್ನು ತೋರಿಸಿ ಅವರ ಹೆಸರುಗಳನ್ನು ಹೇಳಿ ಇವರೇ ನಿಮ್ಮ ಮಂದಿರದ ದಾನ ಪೆಟ್ಟಿಗೆಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಅಂತಾ ಹೇಳಿದ್ದು ಅದರಲ್ಲಿರುವ 5000/- ರೂಗಳಲ್ಲಿ 3000/- ರೂಗಳನ್ನು ಖರ್ಚು ಮಾಡಿರುತ್ತಾರೆ. 2000/- ರೂಗಳನ್ನು ಇವರಿಂದ ಜಪ್ತು ಮಾಡಿಕೊಂಡಿರುತ್ತೇವೆ ಅಂತಾ ಪೋಲೀಸರು ಹೇಳಿದ್ದರ ಮೇರೆಗೆ ನನಗೆ ಗೊತ್ತಾಗಿರುತ್ತದೆ ಅಂತಾ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಈ ಎಲ್ಲ ವಿಷಯ ನಿಜವಿದ್ದರೂ ಹಾಗೂ ಆ ದಿನ ಪೋಲೀಸರು ತೋರಿಸಿದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇದ್ದರೂ ಅವರ ಪರಿಚಯವಿಲ್ಲ ಅಂತಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ಮುರಿದ ಚೀಲಕದ ಕೊಂಡಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಈ ಸಂದರ್ಭದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ಪ್ರ.ದ.ನ್ಯಾದಂ.ಗಳು ಚಿಕ್ಕೋಡಿ.